1	2	3	4	5
			ಕೃಷ್ಣ	01
			ಬಿ.ಟಿ. ಸಿದ್ದಪ್ಪ	01
			ಸತೀಶ್ ಕುಮಾರ್	01
3.	ಕಾಂಕ್ರೀಟ್ ಮೋರಿಗಳ ನಿರ್ಮಾಣ ಕಾಮಗಾರಿ (R.C.C. Deck slab)	23	ಬಿ.ವೈ. ಬಾಬು	01
			ವೈ.ಡಿ. ಹನುಮಂತಯ್ಯ	01
			ಸಿ. ಕರೀಗೌಡ	09
			ಕೃಷ್ಣಪ್ಪ	11
			ಬಿ.ಕೆ. ಲಿಂಗರಾಜು	01
4.	ಇತರೆ ಕಾಮಗಾರಿಗಳು	05	ವೈ.ಡಿ. ಹನುಮಂತಯ್ಯ	03
			ಎಸ್.ಎಸ್. ಚೇತನ್	02

ಮಂಡ್ಯದಲ್ಲಿ ಎ.ಪಿ.ಡಿ.ಪಿ. ಅನುಷ್ಠಾನ

1306 (1980) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಯಾವಾಗ ಎ.ಪಿ.ಡಿ.ಪಿ. ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು?

ಆ) ಪ್ರಸ್ತುತ ಯೋಜನೆಯು ಯಾವ ಹಂತದಲ್ಲಿ ಇದೆ? ಈ ವರೆವಿಗೂ ವಿನಿಯೋಗವಾಗಿರುವ ಮೊತ್ತವೆಷ್ಟು?

ಇ) ಈ ಯೋಜನೆಯ ಅನುಷ್ಠಾನ ಕಾರ್ಯ ತೀರ ಮಂದಗತಿಯಲ್ಲಿ ನಡೆಯುತ್ತಿದ್ದು, ಸ್ಥಗಿತವಾಗುವ ಹಂತಕ್ಕೆ ತಲುಪುವುದಕ್ಕೆ ಕಾರಣಗಳೇನು?

ಈ) ಎ.ಪಿ.ಡಿ.ಪಿ. ಯೋಜನೆಗಳನ್ನು ಮಂಡ್ಯ ಜಿಲ್ಲೆಯಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮಂಡ್ಯ ಜಿಲ್ಲೆಯ ಮಂಡ್ಯ ವಿಭಾಗ ಹಾಗೂ ಪಾಂಡವಪುರ ವಿಭಾಗಗಳಲ್ಲಿ ಅಧಿಕೃತವಾಗಿ ಫೆಬ್ರವರಿ 2001ನೇ ಮಾಹೆಯಲ್ಲಿ ಉದ್ಘಾಟನೆಗೊಂಡಿದ್ದು ಇದರ ಕಾಮಗಾರಿ ಕೆಲಸವು 2001 ಆರಂಭಗೊಂಡಿರುತ್ತದೆ.

ಆ) ಪ್ರಸಕ್ತ ಯೋಜನೆಯು ಮದ್ದೂರು ತಾಲ್ಲೂಕಿನಲ್ಲಿ ಪೂರ್ಣಹಂತ ತಲುಪಿರುತ್ತದೆ. ಮಂಡ್ಯ ತಾಲ್ಲೂಕು ಹಾಗೂ ಮಳವಳ್ಳಿ ತಾಲ್ಲೂಕಿನಲ್ಲಿ ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ. ಇಲ್ಲಿಯವರೆಗೆ 1.7 ಕೋಟಿ ಬಿಲ್ಲಿನ ಹಣ ಮಂಜೂರಾಗಿರುತ್ತದೆ. ಪಾಂಡವಪುರ ವಿಭಾಗದಲ್ಲಿ 30 ಫೀಡರ್ ಕಾಮಗಾರಿ ಕೆಲಸಗಳಲ್ಲಿ 25 ಫೀರ್‌ಗಳ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಉಳಿದ 5 ಫೀಡರ್‌ಗಳ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಇದುವರೆಗೆ ವಿನಿಯೋಗಿಸಿದ ಹಣ 7 ಕೋಟಿ ರೂ.ಗಳ ಕಾಮಗಾರಿ ಕೆಲಸ ಪೂರ್ಣಗೊಂಡಿದ್ದು 354.43 ಲಕ್ಷ ಬಿಲ್ಲಿನ ಹಣ ಮಂಜೂರಾಗಿರುತ್ತದೆ.

ಇ) ಈ ಕಾಮಗಾರಿ ಕೆಲಸವನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆಯವರಿಗೆ ನೀಡಿದ್ದು ಅವರಿಂದ ಈ ಕಾಮಗಾರಿ ನಿರ್ವಹಿಸಲು ಗೊತ್ತು ಮಾಡಿರುವ ಗುತ್ತಿಗೆದಾರರ ಹಣಕಾಸಿನ

ವ್ಯವಹಾರದಲ್ಲಿ ತೊಡಗಿದ್ದು, ಹಾಗೂ ಕಾಮಗಾರಿ ಕೆಲಸಗಳಲ್ಲಿ ಕೆಲವು ನ್ಯೂನತೆಗಳಿದ್ದು, ಇವುಗಳನ್ನು ಸರಿಪಡಿಸಿಕೊಳ್ಳಲು ತಿಳಿಸಲಾಗಿದೆ. ನ್ಯೂನತೆಗಳನ್ನು ಸರಿಪಡಿಸುವ ಕಾಮಗಾರಿ ವಿಳಂಬವಾಗಿರುತ್ತದೆ.

ಈ) ಎ.ಪಿ.ಡಿ.ಪಿ. ಕಾಮಗಾರಿ ಕೆಲಸವನ್ನು ಮಾರ್ಚ್ 2003ರ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಬೆಂಗಳೂರು ಮತ್ತು ಮೈಸೂರು ರೈಲು ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತನೆ

1307 (1981) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಮೈಸೂರು ಮದ್ಯದ ರೈಲು ಮಾರ್ಗವನ್ನು ಜೋಡಿ ಮಾರ್ಗವಾಗಿ, ಪರಿವರ್ತಿಸುವ ಕಾರ್ಯ ಕೈಗೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಕಾರ್ಯ ಯಾವ ಹಂತದಲ್ಲಿದೆ;

ಇ) ಜೋಡಿ ಮಾರ್ಗವಾಗಿ ಪರಿವರ್ತಿಸುವ ಕಾರ್ಯವನ್ನು, ವೇಗವಾಗಿ ಪೂರ್ಣಗೊಳಿಸಲು ಸರ್ಕಾರವು ಏನಾದರೂ ವಿಶೇಷ ಕ್ರಮ ರೂಪಿಸಿದ್ದಲ್ಲಿ, ಅದರ ವಿವರಗಳೇನು;

ಈ) ಯೋಜನೆ ಯಾವಾಗ ಪೂರ್ಣಗೊಳ್ಳುವ ನಿರೀಕ್ಷೆ ಇದೆ?

ಶ್ರೀ ಟಿ. ಜಾನ್ (ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು) :

ಅ) ಬೆಂಗಳೂರು ಮೈಸೂರಿನ ರೈಲ್ವೆ ಮಾರ್ಗವನ್ನು ದ್ವಿಮಾರ್ಗವಾಗಿಸುವ ಕಾಮಗಾರಿಯನ್ನು 2002 03 ನೇ ವರ್ಷದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಸಣ್ಣ ಸೇತುವೆಗಳ ಬೃಹತ್ ಸೇತುವೆಗಳ ನಿರ್ಮಾಣ ಮತ್ತು ಬೆಂಗಳೂರು ಹೆಜ್ಜಾಲ ವಿಭಾಗದ ಮಾರ್ಗದಲ್ಲಿ ಭೂ ಅಗೆತ ಕೆಲಸವನ್ನು ಪ್ರಾರಂಬಿಸಲಾಗಿದೆ. ಈ ಕಾಮಗಾರಿಗಳ ಪ್ರಗತಿದಾಯಕವು ಉತ್ತಮವಾಗಿದೆ. ಹೆಜ್ಜಾಲ ಮತ್ತು ರಾಮನಗರಂ ನಡುವಿನ ಕಾಮಗಾರಿಗೆ ಟೆಂಡರನ್ನು ಇಷ್ಟರೊಳಗೆ ಕರೆಯಲಾಗುವುದು.

ಇ) ಕಾಮಗಾರಿಯ ದೈನಂದಿನ ಪ್ರಗತಿಯ ಬಗ್ಗೆ ಉಸ್ತುವಾರಿ ಮಾಡಲು ರೈಲ್ವೆಯು ಉಪ ಮುಖ್ಯ ಇಂಜಿನಿಯರ್ ರೊಬ್ಬರನ್ನು ಮತ್ತು ಇಬ್ಬರು ಕಾರ್ಯಪಾಲಕ ಇಂಜಿನಿಯರ್‌ರವರನ್ನು ನಿಯೋಜಿಸಿರುತ್ತದೆ. ಈ ಯೋಜನೆಯು ಸೇರಿದಂತೆ ವೆಚ್ಚ ಪಾಲುದಾರಿಕೆಗಾಗಿ 2002 03 ನೇ ಸಾಲಿಗೆ ರಾಜ್ಯ ಸರ್ಕಾರವು ರೂ. 4.00 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಈ) ಬೆಂಗಳೂರು ರಾಮನಗರಂ ವಿಭಾಗವನ್ನು ದ್ವಿಮಾರ್ಗವಾಗಿಸುವ ಗುರಿ ಸಾಧನೆಯು 31.12.2004 ರ ಹೊತ್ತಿಗೆ ಪೂರ್ಣಗೊಳ್ಳಲಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೂತನ ಡಿಪೋಗಳನ್ನು ಮಂಡ್ಯ ಜಿಲ್ಲೆಯಲ್ಲಿ ಪ್ರಾರಂಭಿಸುವುದು

1308 (1982) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋಗಳನ್ನು ಪ್ರಾರಂಬಿಸಬೇಕಾದ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ;